ದಿನಾಂಕ: 05.12.2020 ರಂದು ಮಧ್ಯಾಹ್ನ 3.00 ಗಂಟೆಗೆ ಶಿವನಗರ ವಾರ್ಡ್ ನಂ. 107 ರಲ್ಲಿ ನೋಡಲ್ ಅಧಿಕಾರಿಯವರಾದ **ಶ್ರೀ ಲಿಂಗಣ್ಣ ಗುಂಡಳ್ಳಿ**, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:-**

1. ಶ್ರೀ ಸೋಮಶೇಖರ್.ಜಿ.ಎಲ್ ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ನಾಗರಾಜ್.ಕೆ.ವಿ. ಸಹಾಯಕ ಅಭಿಯಂತರರು, ಬಿ.ಡ್ಬ್ಲ್ಯೂಎಸ್.ಎಸ್.ಬಿ.
3. ಶ್ರೀ ರಮೇಶ್, ಕಿರಿಯ ಅಭಿಯಂತರರು , ಬೆಸ್ಕಾಂ,
4. ಶ್ರೀ ವಿಜಯ್, ಎ.ಎಸ್.ಐ. ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆ
5. ಶ್ರೀ ಲೋಕೇಶ್, ಅಸೆಸ್ಸರ್
6. ಶ್ರೀ ರಮೇಶ್, ವೆಟರ್ನರಿ ಇನ್ಸ್‌ಪೆಕ್ಟರ್,
7. ಶ್ರೀ ರವಿ, ಕಂದಾಯ ವಸೂಲಿಗಾರರು
8. ಶ್ರೀ ನಾಗೇಶ್, ಹೆಡ್ ಕಾನ್ಸ್‌ಟೇಬಲ್,
9. ಶ್ರೀ ಅನಿಕೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 107/ಶಿವನಗರ
10. ಶ್ರೀ ಶ್ರೀನಾಥ್ , ಅರಣ್ಯ ಇಲಾಖೆ,
11. ಶ್ರೀ ಎನ್.ಹೆಚ್.ನಾಗರಾಜ್, ತೋಟಗಾರಿಕೆ ಇಲಾಖೆ
12. ಶ್ರೀ ಆನಂದ್ ಬಾಬು , ಸೂಪರ್ ವೈಸರ್ [ಘನತ್ಯಾಜ್ಯ]
13. ಶ್ರೀ ಕೆ. ವೆಂಕಟೇಶ್, ಸೂಪರ್ ವೈಸರ್ [ಘನತ್ಯಾಜ್ಯ]

ಶ್ರೀ ಸೋಮಶೇಖರ್.ಜಿ.ಎಲ್. ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 107ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಶ್ರೀ ಕೇಶವಮೂರ್ತಿ ರವರು ಮಾತನಾಡುತ್ತಾ, ತಿಮ್ಮಯ್ಯ ರಸ್ತೆ, ಅನ್ನಪೂರ್ಣೇಶ್ವರಿ ಹೋಟೆಲ್ ಹತ್ತಿರುವಿರುವ ಮರದ ಕೊಂಬೆಗಳು ಒಣಗಿದ್ದು, ಸದರಿ ಕೊಂಬೆಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆಯವರಿಗೆ ಅನೇಕ ಬಾರಿ ತಿಳಿಸಿದ್ದರು. ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಅದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಹಾಜರಿದ್ದ ಅರಣ್ಯ ಇಲಾಖೆಯವರಿಗೆ ಈ ಸಭೆ ಮುಗಿದ ಕೂಡಲೇ ದೂರುದಾರೊಂದಿಗೆ ಸ್ಥಳ ಪರಿಶೀಲಿಸಿ, ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

2. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು 12ನೇ ಬಿ ಮುಖ್ಯ ರಸ್ತೆ, ಶಿವನಗರ ಇಲ್ಲಿ ಒಳಚರಂಡಿ ಕೊಳವೆ ಆಗಿಂದ್ದಾಗೆ ಬ್ಲಾಕ್ ಆಗುತ್ತಿರುವುದರಿಂದ ಒಳಚರಂಡಿಯ ನೀರು ಮ್ಯಾನ್ ಹೋಲ್ ಮುಖಾಂತರ ರಸ್ತೆಗೆ ಹರಿಯುತ್ತಿದ್ದು, ಇದರಿಂದ ಸದರಿ ರಸ್ತೆಯ ನಿವಾಸಿಗಳಿಗೆ ತೊಂದರೆಯಾಗುತ್ತಿರುತ್ತದೆ. ಅದುದರಿಂದ ಒಳಚರಂಡಿ ಕೊಳವೆ ಮಾರ್ಗವನ್ನು ದುರಸ್ಥಿಗೊಳಿಸಬೇಕಾಗಿ ಕೋರಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಬಿ.ಡ್ಬ್ಲ್ಯೂಎಸ್.ಎಸ್.ಬಿ. ಸಹಾಯಕ ಅಭಿಯಂತರರು ಮುಂದಿನ ದಿನಗಳಲ್ಲಿ ಕೊಳವೆ ಮಾರ್ಗವನ್ನು ಬದಲಾಯಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

3. ವಾರ್ಡ್ ವ್ಯಾಪ್ತಿಯಲ್ಲಿ ತರಕಾರಿ ವ್ಯಾಪಾರ ಮಾಡುವ ತಳ್ಳುವ ಗಾಡಿಗಳಲ್ಲಿ ಪ್ಲಾಸ್ಟಿಕ್ ಕವರ್‌ಗಳನ್ನು ಗ್ರಾಹಕರಿಗೆ ನೀಡುತ್ತಿದ್ದು, ಇದರ ಬಗ್ಗೆ ಪಾಲಿಕೆಯವರು ಯಾವುದೇ ಕ್ರಮ ಕೈಗೊಳ್ಳುತ್ತಿರುವುದಿಲ್ಲವೆಂದು ಮಹಾಗಣಪತಿನಗರದ ನಿವಾಸಿಗಳು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಈಗಾಗಲೇ ದಂಡವನ್ನು ವಿಧಿಸಲಾಗುತ್ತಿದ್ದು, ಇನ್ನು ಹೆಚ್ಚಿನ ರೀತಿಯಲ್ಲಿ ಮಾರ್ಷಲ್‌ಗಳೊಂದಿಗೆ ದಂಡ ವಿಧಿಸುವ ಕಾರ್ಯಾಚರಣೆ ಹಮ್ಮಿಕೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

4. ಮಹಾಗಣಪತಿನಗರ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿದ್ದು, ಸಾರ್ವಜನಿಕರು ಹಾಗೂ ಮಕ್ಕಳಿಗೆ ರಸ್ತೆಯಲ್ಲಿ ಓಡಾಡಲು ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿರುವ ಮೇರೆಗೆ ಸಭೆಯಲ್ಲಿ ಹಾಜರಿದ್ದ ಶ್ರೀ ರಮೇಶ್ ವೆಟರ್ನರಿ ಇನ್ಸ್‌ಪೆಕ್ಟರ್ ರವರು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಪು.ತಿ.ನೋ.**

Scanned with CamScanner

5. ಬೆಸ್ಕಾಂ ವತಿಯಿಂದ ಕೇಬಲ್ ಅಳವಡಿಸಲು 12ನೇ ಮುಖ್ಯ ರಸ್ತೆ , ಶಿವನಗರ ಇಲ್ಲಿ ಕತ್ತರಿಸಲಾಗಿದ್ದ ರಸ್ತೆಯನ್ನು ಕಾಂಕ್ರೀಟ್‌ನಿಂದ ಮುಚ್ಚುವ ಕಾಮಗಾರಿಯು ಕಳಪೆಯಾಗಿರುವುದಾಗಿ ಶ್ರೀ ಕೇಶವಮೂರ್ತಿ ಎಂಬುವವರು ಸಭೆಗೆ ತಿಳಿಸಿದರು. ಇದರ ಬಗ್ಗೆ ಮಾತನಾಡುತ್ತಾ, ನೋಡಲ್ ಅಧಿಕಾರಿಗಳು ಸಭೆಗೆ ಯಾವಾಗಲು ತಡವಾಗಿ ಆಗಮಿಸುವ ಮತ್ತು ಗೈರು ಆಗಿರುವ ಬೆಸ್ಕಾಂ ಅಧಿಕಾರಿಗಳಿಗೆ ಹಲವಾರು ಬಾರಿ ಸಭೆ ಆಕ್ರೋಶ ವ್ಯಕ್ತಪಡಿಸಿರುತ್ತದೆ. ಇದೇ ರೀತಿ ವಾರ್ಡ್ ಸಭೆಯನ್ನು ನಿರ್ಲಕ್ಷ ಮಾಡಿದರೆ ಸಕ್ಷಮ ಪ್ರಾಧಿಕಾರದ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಲಾಗುವುದೆಂದು ತಿಳಿಸಿದರು. ಮತ್ತು ಗುಣಮಟ್ಟದ ಕಾಮಗಾರಿಯನ್ನು ನಿರ್ವಹಿಸಲು ಬೆಸ್ಕಾಂ ಅಧಿಕಾರಿಗಳಿಗೆ ಪತ್ರ ಬರೆಯಲು ಸೂಚಿಸಿದರು.

6. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಯನ್ನು ಸರಿಯಾಗಿ ನಿರ್ವಹಿಸುತ್ತಿರುವುದಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಅಸಮಧಾನವನ್ನು ವ್ಯಕ್ತಿಪಡಿಸಿದರು. ಮತ್ತು ಮೋಟಪ್ಪ ಉಧ್ಯಾನವನದ ಒಳಗೆ ಬೀದಿ ದೀಪಗಳು ಇಲ್ಲದೆ ಇರುವುದರಿಂದ ಸಂಜೆಯ ಸಮಯದಲ್ಲಿ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದಾಗಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಬೀದಿ ನಿರ್ವಹಣೆಯ ಗುತ್ತಿಗೆದಾರರು ಮುಂದಿನ ದಿನಗಳಲ್ಲಿ ಬೀದಿ ದೀಪಗಳ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡಲಾಗುವುದೆಂದು ತಿಳಿಸಿದರು.

7. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ **E-Toilet** ನಿರ್ಮಾಣ ಮಾಡಲು ಜಾಗವನ್ನು ವಾರ್ಡ್ ಕಮಿಟಿ ಸದಸ್ಯರು ಸೂಚಿಸಬೇಕೆಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು, ವಾರ್ಡಿನಲ್ಲಿ ಸ್ಥಳದ ಅಭಾವವಿರುವುದರಿಂದ ಪಶ್ಚಿಮ ಕಾರ್ಡ್ ರಸ್ತೆಯ ಕಬಡಿ ಕಲ್ಯಾಣ ಮಂಟಪದ ಹತ್ತಿರ ಪಾದಚಾರಿ ಮಾರ್ಗದಲ್ಲಿ ಶೌಚಾಲಯವನ್ನು ನಿರ್ಮಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ತಿಳಿಸುವ ದೂರುಗಳನ್ನು ಸರಿಪಡಿಸಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡುವಂತೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು
ವಾರ್ಡ್ ನಂ. 107

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು [ಪಶ್ಚಿಮ] ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು [ಪಶ್ಚಿಮ] ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು [ಪಶ್ಚಿಮ] ಬಿ.ಬಿ.ಎಂ.ಪಿ. ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು , ರಾಜಾಜಿನಗರ ವಿಭಾಗ/ಯೋಜನೆ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಘನತ್ಯಾಜ್ಯ] ರಾಜಾಜಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಬಿ.ಡಬ್ಲ್ಯೂ.ಎಸ್.ಎಸ್.ಬಿ.] ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೀದಿ ದೀಪಗಳ ನಿರ್ವಹಣೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಬೆಸ್ಕಾಂ] ಉಪವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ರಸ್ತೆ ಮತ್ತು ಮೂಲ ಭೂತ ಸೌಕರ್ಯ,] ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
10. ಕಲ್ಯಾಣ ಅಧಿಕಾರಿ, ಪಶ್ಚಿಮ ವಲಯ, ಬಿ.ಬಿ.ಎಂ.ಪಿ. ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಸಂಚಾರಿ ಪೋಲೀಸ್ ಠಾಣೆ, ರಾಜಾಜಿನಗರ/ವಿಜಯನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಪೋಲೀಸ್ ಠಾಣೆ, ರಾಜಾಜಿನಗರ/ಬಸವೇಶ್ವರನಗರ, ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಅರಣ್ಯಾಧಿಕಾರಿ, ಬಿ.ಬಿ.ಎಂ.ಪಿ. ಪಶ್ಚಿಮ ರವರ ಮಾಹಿತಿಗಾಗಿ ಸಲ್ಲಿಸಿದೆ.

Scanned with CamScanner